ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮಾನ್ಯ ಅರಣ್ಯ ಇಲಾಖೆಯ ಸಚಿವರು ಸರ್ಕಾರಕ್ಕೆ ಗಣಿಗಾರಿಕೆಯ ಇಲಾಖೆಯಲ್ಲಿ ಹೆಚ್ಚಿಗೆ ಆದಾಯವನ್ನು ತರತಕ್ಕದ್ದಕ್ಕೆ ಅವಕಾಶಗಳು ಇದೆ ಎನ್ನುವುದರ ಬಗ್ಗೆ ನನ್ನ ಗಮನಕ್ಕೆ ತಂದಿದ್ದಾರೆ. ಇವತ್ತು ಪತ್ರಿಕೆಗಳಲ್ಲಿ ಬಂದಿರತಕ್ಕ ವರದಿಗಳ ಬಗ್ಗೆ ನನಗೆ ಮಾಹಿತಿಗಳು ಇಲ್ಲ. ನಾನು ಆ ದೃಷ್ಟಿಯಿಂದಲೇ ಹೇಳಿದ್ದು. ಪತ್ರಿಕೆಗಳಲ್ಲಿ ಮಾನ್ಯ ಅರಣ್ಯ ಸಚಿವರು ಹೇಳಿಕೆ ಕೊಟ್ಟಿರತಕ್ಕದ್ದು ಅಲ್ಲ. ಪತ್ರಿಕೆಯಲ್ಲಿ ಅವರು ವರದಿ ಮಾಡಿರತಕ್ಕದ್ದು. ಗಣಿಗಾರಿಕೆಯ ಒಂದು ಇಲಾಖೆಯಲ್ಲಿ ನಾವು ಹೆಚ್ಚಿಗೆ ಹಣವನ್ನು ಆರ್ಥಿಕ ಬೊಕ್ಕಸವನ್ನು ತುಂಬಿಸಲಿಕ್ಕೆ ಅವಕಾಶ ಇದೆ ಎಂಬ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅದರ ಬಗ್ಗೆ ನಾನು ಪರಿಶೀಲಿಸುತ್ತಿದ್ದೇನೆ. ನಾನು ಈ ವಿಷಯದಲ್ಲಿ ಚರ್ಚೆ ಮಾಡಬೇಕು ಎಂದರೆ ಮುಂದಿನ ದಿನದಲ್ಲಿ ತಾವೇನು ಒಂದು ಸಮಯವನ್ನು ನಿಗದಿ ಮಾಡಿದರೆ ಇದರ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಲಿಕ್ಕೆ ಸರ್ಕಾರ ಸಿದ್ಧವಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಮುಖ್ಯಮಂತ್ರಿಯವರು ಒಪ್ಪಿಕೊಂಡಿದ್ದಾರೆ. ಅದ್ದರಿಂದ ಇದಕ್ಕೆ ಕಾಲವನ್ನು ನಿಗದಿ ಮಾಡಿ.

ಶ್ರೀ ವಾಟಾಳ್ ನಾಗರಾಜ್: ಇದು ವಿಧಾನ ಪರಿಷತ್ತಿನಲ್ಲಿ ಚರ್ಚೆಯಾಗುತ್ತಿದೆ.

ಅಧ್ಯಕ್ಷರು: ಆಯಿತು. ಅವರು ಒಪ್ಪಿಕೊಂಡಾದ ಮೇಲೆ ಕಾಲಮಿತಿ ಮಾಡೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ವಿಧಾನ ಪರಿಷತ್ತಿನಲ್ಲಿ ನಿಲುವಳಿ ಸೂಚನೆ ಮಂಡಿಸಿದ್ದಾರೆ. ನಾವಿಲ್ಲಿ ಏನೂ ಮಾಡದಿದ್ದರೆ ನಮ್ಮನ್ನು ಜನರು ಏನೆಂದು ಹೇಳುತ್ತಾರೆ. ಇದು ಬಹಳ ಮುಖ್ಯವಾದಂಥ ಪ್ರಶ್ನೆ. ಈಗ ವಿಧಾನ ಪರಿಷತ್ತಿನಲ್ಲಿ ನಿಲುವಳಿ ಸೂಚನೆ ಮೇಲೆ ಚರ್ಚೆಯಾಗುತ್ತಿದೆ. ನಾವು ಇನ್ನೂ ಯಾವತೋ ಚರ್ಚೆ ಮಾಡುತ್ತೇವೆಂದರೆ ಜನರು ವಿಧಾನಸಭೆಯನ್ನು ಏನೆಂದು ಹೇಳುತ್ತಾರೆ?

ಶ್ರೀ ವಾಟಾಳ್ ನಾಗರಾಜ್: ಇವತ್ತು ಚರ್ಚೆಗೆ ತಾವು ಅವಕಾಶ ಕೊಟ್ಟುಬಿಡಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇವತ್ತೇ ಅದನ್ನು ತರಬೇಕು. ಅಲ್ಲಿ ವಿಧಾನ ಪರಿಷತ್ತಿನಲ್ಲಿ ಚರ್ಚೆಯಾಗುತ್ತಿದೆ.

ಅಧ್ಯಕ್ಷರು: ಆಯಿತು ಕುಳಿತುಕೊಳ್ಳಿ. ಅದಕ್ಕೆ ಸಮಯ ನಿಗದಿ ಮಾಡುತ್ತೇನೆ. ಕುಳಿತುಕೊಳ್ಳಿ.

ಈ) ವಿಷಯ: ಕುಪ್ಪದಗುಡ್ಡದಲ್ಲಿ ಗಾಳಿ ವಿದ್ಯುತ್ ಯೋಜನೆ ಪ್ರಾರಂಭವಾಗಿರುವ ಬಗ್ಗೆ.

ಶ್ರೀ ಎಸ್.ಎಸ್. ಪಾಟೀಲ್(ಮುಂಡರಗಿ): ಮಾನ್ಯ ಅಧ್ಯಕ್ಷರೆ, ಕಪ್ಪದಗುಡ್ಡದಲ್ಲಿ ಗಾಳಿ ವಿದ್ಯುತ್ ಯೋಜನೆ ಪ್ರಾರಂಭವಾಗಿದೆ. ನಾನು ಈಗಾಗಲೇ ಇದರ ಬಗ್ಗೆ ಶೂನ್ಯವೇಳೆಯಲ್ಲಿ ತಮಗೆ ಪತ್ರ ಬರೆದಿದ್ದೆ. ಅದರ ಪ್ರಕಾರ ತಾವು ಅವಕಾಶ ಕೊಟ್ಟಿದೀರಿ ಕೆಲವು ಉತ್ತರವನ್ನೂ ಸಹ ಕಳುಹಿಸಿದ್ದಾರೆ ಅದನ್ನು ಯಾರ್ಯಾರಿಗೆ ಕೊಟ್ಟಿದ್ದೀರಿ ಎಂದು ಕೇಳಿದ್ದೆ. ಅದರ ಬಗ್ಗೆ ಏನನ್ನೂ ಹೇಳಿರುವುದಿಲ್ಲ. ಅಲ್ಲಿ ಆ ಯೋಜನೆಯನ್ನು ಮಾಡುವುದರಿಂದ ಪರಿಸರಕ್ಕೆ ಹಾನಿಯಾಗುತ್ತಿದೆಯೆಂದು ಜನರಲ್ಲಿ ಭಾವನೆ ಬಂದು ಈಗಾಗಲೇ ದೊಡ್ಡ ಹೋರಾಟವಾಗಿ ನಾವು ಸತ್ಯಾಗ್ರಹ ಹೂಡುವ ಪರಿಸ್ಥಿತಿ ಬಂದಿದೆ. ಅದರ ಬಗ್ಗೆ ಹೇಳಬೇಕು. ಆ ಪರಿಸರ ಹಾಳಾಗುವ ಕಾರಣದಿಂದ ಆ ಕಂಪನಿಯವರಿಂದ ದುಡ್ಡನ್ನು ತುಂಬಿಸಿಕೊಂಡಿರುತ್ತಾರಂತೆ. ಆ ಹಣ ನಿಮ್ಮ ಹತ್ತಿರ ಇದೆಯೋ ಅಥವಾ ಕೇಂದ್ರ ಸರ್ಕಾರದ ಹತ್ತಿರ ಇದೆಯೋ ಎಂಬುದು ನಮಗೆ ಗೊತ್ತಿಲ್ಲ. ಆ ರೀತಿ ದುಡ್ಡನ್ನೇನು ತುಂಬಿಸಿಕೊಂಡಿರುತ್ತೀರಿ, ಅದನ್ನು ಅದೇ ಗುಡ್ಡಕ್ಕೆ ಉಪಯೋಗ ಮಾಡಬೇಕು. ಅದರ ಬಗ್ಗೆ ತಾವೇನು ಹೇಳುತ್ತೀರಿ ಎಂಬುದನ್ನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳುತ್ತಿದ್ದೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕದ ಗದಗ್ ಜಿಲ್ಲೆ ಗಾಳಿ ಶಕ್ತಿಯಲ್ಲಿ ಉತ್ಕೃಷ್ಟ ಮಟ್ಟದಲ್ಲಿದ್ದು ಈ ಪ್ರದೇಶದಲ್ಲಿ ಕ್ರೆಡಲ್ ಮತ್ತು ಕೇಂದ್ರ ಸರ್ಕಾರದ ಅಸಂಪ್ರದಾಯಕ ಇಂಧನ ಮೂಲಗಳ ಮಂತ್ರಾಲಯ ಇವರುಗಳ ಜೊತೆಗೂಡಿ ಕಳೆದ ಎರಡು ದಶಕಗಳಲ್ಲಿ ಎಂಟು ಗಾಳಿ ಸಮೀಕ್ಷೆ ಕೇಂದ್ರಗಳನ್ನು ಸ್ಥಾಪಿಸಿದ್ದರ ಪರಿಣಾಮವಾಗಿ ಜಿಲ್ಲೆಯಲ್ಲಿ ಒಟ್ಟಾರೆ 650 ಮೆಗಾವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಘಟಕಗಳನ್ನು ಸ್ಥಾಪಿಸಬಹುದಾಗಿರುತ್ತದೆ ಎಂದು ಅಂದಾಜು ಮಾಡಲಾಗಿದೆ. ಕರ್ನಾಟಕ ಸರ್ಕಾರವು ಕಳೆದ 10–12 ವರ್ಷಗಳ ಅವಧಿಯಲ್ಲಿ 15 ಪವನ್ ವಿದ್ಯುತ್ ಅಭಿವೃದ್ಧಿದಾರರಿಗೆ ಒಟ್ಟಾರೆ 327.155 ಮೆಗಾವ್ಯಾಟ್ ಸಾಮರ್ಥ್ಯವುಳ್ಳ ಪವನ ವಿದ್ಯುತ್ ಘಟಕಗಳನ್ನು ಹಂಚಿಕೆ ಮಾಡಿ ಆದೇಶ ಹೊರಡಿಸಿರುತ್ತದೆ. ಆ ಪೈಕಿ 26.555 ಮೆಗಾವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಘಟಕಗಳು ಅನುಷ್ಠಾನಗೊಂಡು ವಿದ್ಯುತ್ ಉತ್ಪಾದನೆಯಲ್ಲಿ ಕಾರ್ಯಾರಂಭಗೊಂಡಿರುತ್ತದೆ. ಸದರಿ ಪ್ರದೇಶದಲ್ಲಿ ಕರ್ನಾಟಕ ಸರ್ಕಾರವು ಪ್ರಪ್ರಥಮವಾಗಿ ಪ್ರಾತ್ಯಕ್ಷಿತ ಪವನ ವಿದ್ಯುತ್ ಘಟಕವನ್ನು ಸ್ಥಾಪಿಸುವುದರ ಜೊತೆ ತಾಂತ್ರಿಕ ಮತ್ತು ಆರ್ಥಿಕ ಕಾರ್ಯಸಾಧ್ಯತೆಯ ಪ್ರಮಾಣವನ್ನು ಸಾಮಾನ್ಯ ಜನತೆಗೆ ತೋರಿಸಿಕೊಟ್ಟಿರುವುದರಿಂದ ಈ ಪ್ರದೇಶದಲ್ಲಿ ಗಣನೀಯ ಪ್ರಮಾಣದ ಬಂಡವಾಳ ಹೂಡಿಕೆ ಮತ್ತು ಪವನ ವಿದ್ಯುತ್ ಘಟಕದ ಅಭಿವೃದ್ಧಿ ಚಟುವಟಿಕೆಯು ವೇಗವಾಗಿ ನಡೆಯುತ್ತದೆ. ಈ ಯೋಜನೆಗಳ ಅನುಷ್ಠಾನದಿಂದ ಯಾವುದೇ ರೀತಿಯ ವಾಯು ಮತ್ತು ಜಲಮಾಲಿನ್ಯ ಉಂಟಾಗುವುದಿಲ್ಲ. ಗಾಳಿ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆಗೆ ಸಂಬಂಧಿಸಿದಂತೆ ಉಪಸ್ಥಾವರದ ಕಟ್ಟಡವನ್ನು ಕಟ್ಟಬೇಕಿದ್ದು ಮತ್ತು ರಸ್ತೆ ನಿರ್ಮಾಣ ಮಾಡಬೇಕಾದಲ್ಲಿ ಕೆಲವೊಮ್ಮೆ ಸದರಿ ಸ್ಥಳಗಳಲ್ಲಿ ಮರಗಳನ್ನು ಕಡಿಯಬೇಕಾಗಿದ್ದು ಸ್ವಲ್ಪಮಟ್ಟಿಗೆ ಪರಿಸರಕ್ಕೆ ಹಾನಿಯುಂಟಾಗುವ ಸಾಧ್ಯತೆ ಇದೆ.

ಶ್ರೀ ಎಸ್.ಎಸ್. ಪಾಟೀಲ್: ಪರಿಸರಕ್ಕೆ ಹಾನಿಯಾಗುತ್ತದೆ ಎಂಬುದನ್ನು ತಾವು ಒಪ್ಪಿಕೊಂಡಿದ್ದೀರಿ. ಯಾವ್ಯಾವ ಕಂಪನಿಗೆ ಇದನ್ನು ಕೊಟ್ಟಿದ್ದೀರಿ, ಎಂಬ ಬಗ್ಗೆ ಇದರಲ್ಲಿ ಹೇಳಲಿಲ್ಲ. ಅನಂತರ ಆ ಕಂಪನಿಯವರು ಎಷ್ಟು ಹಣ ತುಂಬಿದ್ದಾರೆ ಆ ಪರಿಸರ ಹಾನಿಯಾದನ್ನು ಪುನಃ ತುಂಬಿಕೊಳ್ಳಲು ಆ ಹಣವನ್ನು ಅದೇ ಗುಡ್ಡದಲ್ಲೇ ಉಪಯೋಗಿಸುತ್ತೀರೋ ಹೇಗೆ ಎಂದು ಕೇಳುತ್ತೇನೆ. ಅಲ್ಲಿ ಗಿಡಗಳನ್ನೇನು ನಾಶ ಮಾಡಿರುತ್ತೀರಿ, ಪುನಃ ಅಲ್ಲಿ ಗಿಡಗಳನ್ನು ಹಾಕಲು ಅದೇ ಗುಡ್ಡದಲ್ಲಿ ಮಾಡಬೇಕೆಂದು ಕಾಯ್ದೆ ಇದೆಯಂತೆ. ಆದರೆ ಆ ಹಣವನ್ನು ಯಾರೋ ತುಂಬಿಸಿಕೊಂಡಿರುತ್ತಾರೆ, ಎಲ್ಲಿಗೋ ಆ ಹಣವನ್ನು ಕೊಡುತ್ತಾರೆ. ಈ ಗುಡ್ಡಗಳು ಬೋಳುಗುಡ್ಡಗಳಾಗಿ ಉಳಿದುಬಿಡುತ್ತದೆ. ಆದ್ದರಿಂದ ದಯವಿಟ್ಟು ಅಲ್ಲಿ ಪರಿಸರ ಕೆಡದಂತೆ ಗಿಡಗಳನ್ನು ತುಂಬುವ ಕೆಲಸವನ್ನು ಮಾಡುತ್ತೀರೋ ಹೇಗೆ ಎಂಬುದನ್ನು ಹೇಳಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: 15 ಪವನ ವಿದ್ಯುತ್ ಅಭಿವೃದ್ಧಿದಾರರಿಗೇನು ಕೊಟ್ಟಿದ್ದೇವೆ, ಅದರಿಂದ ಬರತಕ್ಕ ಹಣವನ್ನು ತಾವು ಹೇಳಿದಂತೆ ಪರಿಸರಕ್ಕೆ ಹಾನಿಮಾಡತಕ್ಕ ಸಂದರ್ಭದಲ್ಲಿ ಆ ಭಾಗದಲ್ಲಿ ಆ ಪರಿಸರವನ್ನು ಉಳಿಸಲು ವಿನಿಯೋಗ ಮಾಡುತ್ತೇವೆ.

ಶ್ರೀ ಎಸ್. ಶಿವಣ್ಣ (ತುಮಕೂರು): ಮಾನ್ಯ ಅಧ್ಯಕ್ಷರೆ, ನಾನು ತುಮಕೂರು ನಗರದ ಆಶಾ ಲ್ಯೂಬ್ರಿಕೆಂಟ್ಸ್ ಮಾಲೀಕರು ಸುಫಾರಿ ನೀಡಿರುವ ಕುರಿತು ಚರ್ಚೆ ಮಾಡಬೇಕೆಂದು ತಮ್ಮ ಗಮನಕ್ಕೆ ತಂದಿದ್ದೆ. ಆದರೆ ವಿಚಾರಣೆ ಇತ್ತು. ಅದಾದಮೇಲೆ ಅದನ್ನು ಕೇಳೋಣವೆಂದು ನಾನು ಮತ್ತು ಮಾನ್ಯ ರಾಜಣ್ಣ ನವರು ತಮ್ಮ ಗಮನಕ್ಕೆ ತಂದಿದ್ದರಿಂದ, ಅದನ್ನು ಇನ್ನೊಂದು ಸಲ ತೆಗೆದುಕೊಳ್ಳಿ, ದಯಮಾಡಿ ಕ್ಷಮಿಸಿ ಬಿಡಿ.